**ವಿಜಯವಿಠಲಕೃತ**

## ಶ್ರೀ ಜಯರಾಯರ ಸ್ತೋತ್ರ ಸುಳಾದಿ

ದೃವತಾಳ–

ಜಯರಾಯ ಜಯರಾಯ ಜಯದೇವಿ
ಅರಸನ್ನಾಶ್ರಯಮಾಡಿ ಕೊಂಡಿಪ್ಪ ತಪ್ಪೋ ವಿತ್ತಪ ।
ಭಯವ ಪರಿಹರಿಸಿ ಭವದುರರ ಹರಿಭ ।
ಕ್ತಿಯಕೊಡು ಜ್ಞಾನ ವೈರಾಗ್ಯದೊಡನೆ ।
ದಯ ದೃಷ್ಟಿಯಿಂದ ನೋಡು ಕಾಪಾಡು ಮಾತಾಡು ।
ಲಯ ವಿವರ್ಜಿತವಾದ ವೈಕುಂಟಕೆ ।
ಸಯಮಾಗಿ ಮಾರ್ಗ ತೋರೊ ಸಜ್ಜನರೊಳಗಿಟ್ಟು ।
ಜಯವ ಪಾಲಿಸು ಎನಗೆ ಯತಿಕುಲ ರನ್ನ ।
ಆಯುತ್ತಕ್ಕಾದರು ನಾನು ಐಹಿಕ ಸೌಖ್ಯವನೊಲ್ಲೆ ।
ಬಯಸುವ ಸತತದಲ್ಲಿ ಹರಿಯನಾಮ ।
ತ್ರಯಗಳೆ ನಾಲಿಗೆಲಿ ನೆನೆದು ಕರ್ಮ ।
ಕ್ಷಯವಾಗುವಂತೆ ಕ್ಷಿಪ್ರದಲ್ಲಿ ಬಿಡಿದೆ ।
ಪ್ರಯತ್ನವೆಂಬೋದಿದಕೆ ಸಾರ್ಥಕವಾಗಲಿ ।
ಪಯೋನಿಧಿ ಸುತೆರಮಣ ಮನದೊಳು ನಿಲ್ಲಲು ।
ಪಯಃ ಪಾನದಿಂದಧಿಕ ನಿಮ್ಮ ದರುಶನ ವೆನಗೆ ।
ಪ್ರಿಯ ಮತ್ತೊಂದಾವುದು ಇಲ್ಲ ಇದೇ ಬಲು ಲಾಭ ।
ಗಯ ಕಾಶಿ ತ್ರಿಸಂಗಮ ಮೊದಲಾದ ತೀರ್ಥ ಕ್ಷೇತ್ರ
ನಯದಿಂದ ಮಾಡಿದ ಫಲಬಪ್ಪೊದು।
ಪಯೋಧರಗಳ ತಿನದಂತೆ ಮಾಳ್ಪದು ।
ಹೃದಯದೊಳಗಿಪ್ಪ ದನೆನ್ಗೆ ಇದೇ ಏಕಾಂತ ।
ಭಯಕೃದ್ಭಯನಾಶ ವಿಜಯ ವಿಠಲನ ಸೇವೆಯ ಮಾಳ್ಪ
ಸದ್ಗುಣಶೀಲ ಸುಜನ ಪಾಲಾ ॥

ಮಟ್ಟತಾಳ–

ಆವಜನುಮದ ಪುಣ್ಯ ಫಲಿಸಿತೊ ಎನಗೆಂದು ।

ರಾವುತರಾಗಿದ್ದ ಜಯತೀರ್ಥರ ಕಂಡೆ ।
ದೇವಾಂಶರು ಇವರ ಸ್ವರೂಪವನ್ನು ।
ಭಾವದಿಂದಲಿ ತಿಳಿದು ಕೊಂಡಾಡುವನ್ನಲುಧನ್ಯ ।
ಪಾವಿನ ಪರಿಯಲ್ಲಿ ಇಲ್ಲಿ ಇರುತಿಪ್ಪ ।
ಕಾವುತ ಭಕುತರನ ಪಾವನ ಗೈಸುವ ।
ದೇವ ದೇವೇಶ ಸಿರಿ ವಿಜಯ ವಿಠಲನಂಘ್ರಿ ।
ತಾವರೆಭಜಿಸುವೆ ನಿಷ್ಕಾಮುಕ ಮೌನಿ ।

ತ್ರಿವಿಡಿ ತಾಳ–

ವೈಷ್ಣವ ಜನ್ಮ ಬಂದುದಕಿದೇ ಸಾಧನ ।
ವಿಷ್ಣುವಿನ ಭಕುತಿ ದೊರಿಕಿದುದಕೆ ।
ನಷ್ಟವಾಯಿತು ಎನ್ನ ಸಂಚಿತಗಾಮಿಕರ್ಮ ।
ಕಷ್ಟದಾರಿದ್ರ್ಯಗಳು ಹಿಂದಾದವೂ ತೃಷ್ಣನಾದೆನೊ ಎನ್ನ
ಕುಲಕೋಟಿ ಸಹಿತ ಆ ।
ಅರಿಷ್ಟ ಮಾರ್ಗಕೆ ಇನ್ನು ಪೋಗೆ ನಾನು ।
ಸೃಷ್ಟಿಯೊಳಗೆ ಇವರ ದರ್ಶನವಾಗದಲೆ ।
ಸ್ಪಷ್ಟವಾದ ಜ್ಞಾನ ಪುಟ್ಟದಯ್ಯಾ ।
ಇಷ್ಟುಕಾಲ ಬಿಡದೆ ಮುಂದೆ ಮಾಡುವ ಬಲು ।
ನಿಷ್ಟಗೆ ಅನುಕೂಲ ತಾತ್ವಿಕರು ।
ಶಿಷ್ಟಾಚಾರವನ್ನು ಮೀರಿದಲೆ ನಿಮ್ಮ ।
ಇಷ್ಟಾರ್ಥ ಬಯಸುವದು ಉಚಿತದಲ್ಲಿ ।
ವೈಷ್ಣವಾಚಾರ್ಯರ ಮತ ಉದ್ಧಾರಕರ್ತ ।
ಭ್ರಷ್ಟವಾದಿಗಳನ್ನು ನುಗ್ಗಲೊತ್ತಿ ।
ಕೃಷ್ಣವಂದಿತ ನಮ್ಮ ವಿಜಯ ವಿಠಲರೇಯನ ।
ಅಷ್ಟಕತೃತ್ವ ಸ್ಥಾಪಿಸಿದ ಧೀರಾ ॥

ಅಟ್ಟತಾಳ–

ಕುಶರಾಯ ಇಲ್ಲಿ ತಪಸು ಮಾಡಿದಂಥ ।
ವಸತಿಯ ನೋಡಿ ದಿಗ್ದೇಶವ ಜಯಿಸಿ ಮಾ ।
ಸದಲ್ಲಿ ತಿಳಿದು ಅಕ್ಷೋಭ್ಯತೀರ್ಥರು ಇಲ್ಲಿ ।

ನಸುನಗುತಲೆ ವಾಸವಾದರು ಬಿಡಿದಲೆ ।
ಋಷಿಕುಲೋತ್ತಮರಾದ ಜಯರಾಯರು ನಿತ್ಯ ।
ಬೆಸನೆ ಬೆಸನೆ ಬಂದು ಗುಪ್ತದಲ್ಲಿ ಪೂ ।
ಜಿಸುವರು ಪ್ರೀತಿಲೆ ಏನೆಂಬೆನಾಚರ್ಯ ಶಶಿವರ್ಣದಂತೆ
ಪೊಳೆವ ದರುಶನ ಗ್ರಂಥ ।
ರಸ ಪೂರಿತವಾಗಿ ವಿಸ್ತರಿಸಿದರು ವಿ ।
ಕಸಿತವ ಮಾಡಿ ಕರದ ಕನ್ನಡಿಯೆಂತೆ ।
ಕುಶಲ ಮಾನವರಿಗೆ ಜ್ಞಾನ ಹೆಚ್ಚುವಂತೆ ।
ವಸುಧೆಯೊಳಗೆ ನಮ್ಮ ವಿಜಯ ವಿಠಲರೇಯ ।
ವಶವಾಗುವದಕ್ಕೆ ಪ್ರಸಾದ ಮಾಡಿದರು ॥

ಆದಿತಾಳ–

ಈ ಮುನಿವೊಲಿದರೆ ಅವನೆ ಭಾಗ್ಯವಂತ ।
ಭೂಮಿಯೊಳಗೆ ಮುಕ್ತಿ ಯೋಗ್ಯನೆನಿಸುವನು।
ಭೀಮ ಭವಾಂಬುಧಿ ಬತ್ತಿ ಪೋಗುವದು ನಿ ।
ಸ್ಸೀಮನಾಗುವ ಪಂಚ ಭೇಧಾರ್ಥ ಪ್ರಮೇಯದಲ್ಲಿ ।
ತಾಮಸ ಜನರಿಗೆ ಭಕ್ತಿ ಪುಟ್ಟದು ದುಃಖ ಮಹೋದಧಿಯೊಳು
ಸೂಸುತಲಿಪ್ಪರು ಸ್ವಾಮಿ ಈಗಲೆ ಬಂದು ದುರುಳ ಮನುಜನ ನೋಡಿ ನಾ ।
ಮೊರೆ ಇಡುವೆನು ಕಾಯೊ ಕರುಣದಲ್ಲಿ ಯಾಮ
ಯಾಮಕೆ ನಿಮ್ಮ ಸ್ಮರಣೆ ಪಾಲಿಸಿ ಉತ್ತಮ ಬುದ್ಧಿ
ಕೊಟ್ಟು ಕೃತಾರ್ಥನ್ನ ಮಾಡು ।
ರಾಮ ಸುಗುಣಧಾಮ ವಿಜಯವಿಠಲರೇಯನ್ನ ।
ನಾಮ ಕೊಂಡಾಡುವ ಟೀಕಾಚಾರ್ಯ ॥

ಜತೆ–

ಮೇಘನಾಥ ಪುರ ಕಕುರ ವೇಣಿ ವಾಸ ।
ರಾಘವೇಶ ವಿಜಯ ವಿಠಲನ್ನ ನಿಜದಾಸ ॥

॥ ಶ್ರೀಕೃಷ್ಣಾರ್ಪಣಮಸ್ತು ॥